ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 03 ಗ್ರಾನೀಸ (8)2016

2ನೇ ಮಹಡಿ, 'E' Block,
K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:21.06.2016

**ಇವರಿಂದ :**

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,

ಅತಿ ಪ್ರಾಮುಖ್ಯವಾದುದು

**ಇವರಿಗೆ :**

ರಾಜ್ಯದ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೇ,

ವಿಷಯ: PPP ಮಾದರಿಯಲ್ಲಿ ನೀರು ಶುದ್ಧೀಕರಣ ಘಟಕಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರಾರು ರದ್ದು ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 50 ಗ್ರಾನೀಸ(8)2015, ದಿನಾಂಕ:19.12.2015
2. ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 50 ಗ್ರಾನೀಸ(8)2015, ದಿನಾಂಕ:28.12.2015
3. ದಿನಾಂಕ:05.01.2016ರಂದು ಮಾನ್ಯ ಗ್ರಾಅಪಂ&ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಸಂವಾದ ಹಾಗೂ ನಡವಳಿಗಳು
4. ದಿನಾಂಕ:14.01.2016ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಅಪಂ&ರಾಜ್ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಸಂವಾದ ಹಾಗೂ ನಡವಳಿಗಳು
5. ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 70 ಗ್ರಾನೀಸ(8)2015, ದಿನಾಂಕ:21.01.2016
6. ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 50 ಗ್ರಾನೀಸ(8)2015(PI), ದಿನಾಂಕ:04.02.2016
7. ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 50 ಗ್ರಾನೀಸ(8)2015(PI), ದಿನಾಂಕ:05.02.2016
8. ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 605 ಗ್ರಾಕುನೀ&ನೈಇ 2016, ದಿನಾಂಕ:25.04.2016
9. ಸರ್ಕಾರದ ಪತ್ರ ಸಂಖ್ಯೆ : ಗ್ರಾಅಪ 03 ಗ್ರಾನೀಸ(8)2016, ದಿನಾಂಕ:16.05.2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, PPP ಮಾದರಿಯಲ್ಲಿ ನೀರು ಶುದ್ಧೀಕರಣ ಘಟಕಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ನಿಯಮಾನುಸಾರ ಅನುಮೋದಿತ ಸಂಸ್ಥೆಗಳಾದ M/s Dowac Systems & Projects India Pvt. Ltd, Bangalore ಹಾಗೂ M/s SCOTMAS Limited, Bangalore ಸಂಸ್ಥೆರವರೊದಿಗೆ ಸರ್ಕಾರದ ವತಿಯಿಂದ ಒಡಂಬಡಿಗೆ(MoU) ಹಾಗೂ ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕರಾರು(Agreement) ಮಾಡಿಕೊಂಡು, ನಿವೇಶನಗಳನ್ನು ಗುರುತಿಸಿ, ನಿವೇಶನದ ಚಕ್ಕುಬಂದಿ ಮತ್ತು ನಕ್ಷೆಯನ್ನು ದೃಢೀಕರಿಸಿ ಅನುಮೋದಿತ ಸಂಸ್ಥೆರವರಿಗೆ ವರ್ಗಾಯಿಸಲಾಗಿದ್ದು, ಅನುಮೋದಿತ ಸಂಸ್ಥೆಗಳು ಒಡಂಬಡಿಗೆ/ ಕರಾರು ಪತ್ರದಲ್ಲಿನ ಷರತ್ತುಗಳನ್ವಯ ನಿಗದಿತ ಅವಧಿಯಲ್ಲಿ ಅಂದರೇ **ದಿನಾಂಕ:31.03.2016ರೊಳಗೆ** ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನ ಮಾಡಿ ಸಾರ್ವಜನಿಕರ ಬಳಕೆಗೆ ಅವಕಾಶ ಕಲ್ಪಿಸಬೇಕಾಗಿತ್ತು.

ಆದರೆ, ಸರ್ಕಾರದ ಹಾಗೂ ಜಿಲ್ಲಾ ಪಂಚಾಯತಿಗಳ ವತಿಯಿಂದ ಎಲ್ಲಾ ಅಗತ್ಯ ಸಹಕಾರ ನೀಡಿದ್ದರೂ ಸಹಾ, ನಿಗದಿತ ಅವಧಿಯಲ್ಲಿ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯಾದ ನೀರು ಶುದ್ಧೀಕರಣ ಘಟಕಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರುತ್ತಾರೆ.

ಮುಂದುವರೆದು, ಗ್ರಾಮೀಣ ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿರುವುದರಿಂದ, ಪರ್ಯಾಯ ಅನುಷ್ಠಾನ ವ್ಯವಸ್ಥೆ ಮಾಡಿಕೊಳ್ಳುವುದು ಅನಿವಾರ್ಯವಾಗಿರುತ್ತದೆ. ಆದುದರಿಂದ, ಒಡಂಬಡಿಗೆ/ ಕರಾರು ಪತ್ರದಲ್ಲಿನ ಷರತ್ತುಗಳನ್ವಯ, ಸಂಬಂಧಪಟ್ಟ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕರಾರು ರದ್ದು ಪಡಿಸಲು ಅಗತ್ಯ ಜರೂರು ಕ್ರಮವಹಿಸಲು ಹಾಗೂ ಕೈಗೊಂಡ ಕ್ರಮದ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

(ಎಂ. ಮಂಜುನಾಥ ನಾಯಕ್) 21/6/16
ಆಯುಕ್ತರು ಹಾಗೂ
ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, 'E' Block, K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು-01.
3. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, 'E' Block, K.H.B Complex, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-09.
4. ರಾಜ್ಯದ ಎಲ್ಲಾ (4) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳ ಅಧೀಕ್ಷಕ ಅಭಿಯಂತರರು.
5. ರಾಜ್ಯದ ಎಲ್ಲಾ (30) ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ರವರ ಮಾಹಿತಿಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ..
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.